ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

Monday, the 8th November 1976/Karthika 17, 1898 S.E.

The House met in the Assembly Chamber, Vidhana Soudha, at One of the Clock.

[MADAM SPEAKER (SMT. K. S. NAGARATHNAMMA), in the Chair]

OBITUARY REFERENCES

re : Demise of Dr. A.R. Mudliar, Sri L.S Venkoji Rao, Sri B.N. Gupta, Sri G. Marulappa, Sri V.T. Hooli, Sri H.V. Koujalgi, Sri N.G. Narasimhe Gowda, Sri M.C. Anjeneya Reddy, Smt. Sarojamma Reddy, Smt Thayyamma Veernna Gowda.

ಅಧ್ಯಕ್ಷರು.—ಕೆಳಕಂಡ ವ್ಯಕ್ತಿಗಳ ನಿಧನದ ಬಗ್ಗೆ ಸಂತಾಪ ಸೂಚಿಸಲಂ ವಿಷಾದಿಸುತ್ತೇನೆ.

ಮಾಜಿ ಮೈಸೂರಿನ ದಿವಾನರಾಗಿದ್ದ ೧೯೪೭–೪೮ರ ಅವಧಿಯಲ್ಲಿ ಪ್ರಜಾಪ್ರತಿನಿಧಿ ಸಭೆಯ ಅಧ್ಯಕ್ಷರಾಗಿದ್ದ ಡಾ. ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ಅವರು ೧೭–೭–೧೯೭೬ ರಂದು ನಿಧನರಾದರು

೧೯೫೭–೬೨ನೇ ಅವಧಿಯ ವಿಧಾನಸಭೆ ಹಾಗೂ ೧೯೪೫–೪೮ ಮತ್ತು ೧೯೬೪–೭೦ನೇ ಅವಧಿಯ ವಿಧಾನಪರಿಷತ್ತಿನ ಸದಸ್ಯರಾಗಿದ್ದ ಶ್ರೀ ಎಲ್. ಎಸ್. ವೆಂಕಾಜಿರಾವ್ ಅವರು ೨೧–೭–೧೯೭೬ ರಂದು ನಿಧನರಾದರು

೧೯೪೫–೪೯ನೇ ಅವಧಿಯ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾದ ಶ್ರೀ ಬಿ. ಎನ್. ಗುಪ್ತ ಅವರು ೨೮–೭–೧೯೭೬ ರಂದು ನಿಧನರಾದರು

೧೯೪೫–೪೯ನೇ ಅವಧಿಯ ಪ್ರಜಾಪ್ರತಿನಿಧಿ ಸಭೆ ಹಾಗೂ ೧೯೬೨–೬೭ನೇ ಅವಧಿಯ ವಿಧಾನಸಭೆಯ ಸದಸ್ಯರಾಗಿದ್ದ ಶ್ರೀ ಬಿ. ಮರುಂಳಪ್ಪ ಅವರು ೨೧–೯–೧೯೭೬ರಂದು ನಿಧನರಾದರು.

೧೯೬೨–೬೭ನೇ ಅವಧಿಯ ವಿಧಾನಸಭೆ ಹಾಗೂ ೧೯೫೬–೬೨ನೇ ಅವಧಿಯ ವಿಧಾನ ಪರಿಷತ್ತಿನ ಸದಸ್ಯರಾಗಿದ್ದ ಶ್ರೀ ವೆಂಕಾರೆಡ್ಡಿ ತಿಮ್ಮಾರೆಡ್ಡಿ ಹೂಲಿ ಅವರು ೨೩–೮–೧೯೭೬ರಂದು ನಿಧನರಾದರು.

೧೯೫೭–೬೨ನೇ ಅವಧಿಯ ವಿಧಾನಸಭೆ ಹಾಗೂ ೧೯೬೭–೭೧ನೇ ಅವಧಿಯಲ್ಲಿ ಮಾಜಿ ಕಂದಾಯ ಸಚಿವರಾಗಿದ್ದ ಶ್ರೀ ಎಚ್. ವಿ. ಕೌಜಲಗಿ ಅವರು ೩೦–೮–೧೯೭೬ರಂದು ನಿಧನರಾದರು.

೧೯೪೫–೪೯ನೇ ಅವಧಿಯ ಪ್ರಜಾಪ್ರತಿನಿಧಿ ಸಭೆ ಹಾಗೂ ೧೯೫೭–೬೨ನೇ ಅವಧಿಯ ವಿಧಾನಸಭೆಯ ಸದಸ್ಯರಾಗಿದ್ದ ಶ್ರೀ ಎನ್ ಜಿ. ನರಸಿಂಹೇಗೌಡ ಅವರು ೩೦–೯–೧೯೭೬ರಂದು ನಿಧನರಾದರು

೧೯೫೭–೬೨, ೧೯೬೨–೬೭ನೇ ಅವಧಿಯ ವಿಧಾನಸಭೆಯ ಸದಸ್ಯರೂ ಹಾಗೂ ೧೯೬೮–೭೪ ಮತ್ತು ೧೯೭೪ ರಿಂದ ಪ್ರಸಕ್ತ ವಿಧಾನಪರಿಷತ್ತಿನ ಸದಸ್ಯರೂ ಆಗಿದ್ದ ಶ್ರೀ ಎಂ. ಸಿ. ಆಂಜನೇಯರೆಡ್ಡಿ ಅವರು ೧೬–೯–೧೯೭೬ರಂದು ನಿಧನರಾದರು.

೧೯೪೫-೪೯ನೇ ಅವಧಿಯ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದ ಶ್ರೀಮತಿ ಸರೋಜಮ್ಮ ರೆಡ್ಡಿಯವರು ೧೦-೯-೧೯೭೬ರಂದು ನಿಧನರಾದರು.

೧೯೫೦-೪೫ ಮತ್ತು ೧೯೪೫-೪೯ನೇ ಅವಧಿಯ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದ ಶ್ರೀಮತಿ ತಾಯಮ್ಮ ವೀರಣ್ಣಗೌಡ ಅವರು ೨೪-೯-೧೯೭೬ರಂದು ನಿಧನರಾದರು.

ಶ್ರೇಯೋತರುಗಳಾದ ಡಾ. ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್, ಎಸ್. ಎಸ್. ವೆಂಕಾಜಿರಾವ್, ಬಿ. ಎನ್. ಗುಪ್ತ, ಜಿ. ಮರುಳಪ್ಪ, ವೆಂಕಾರೆಡ್ಡಿ, ತಿಮ್ಮರೆಡ್ಡಿ ಹೂಲಿ, ಎಚ್ ವಿ. ಕೌಜಲಗಿ, ಎನ್. ಜಿ. ನರಸಿಂಹೇಗೌಡ, ಎಂ ಸಿ. ಆಂಜನೇಯರೆಡ್ಡಿ ಶ್ರೀಮತಿ ಸರೋಜಮ್ಮರೆಡ್ಡಿ, ಶ್ರೀಮತಿ ತಾಯಮ್ಮ ವೀರಣ್ಣಗೌಡ ಅವರುಗಳ ನಿಧನದ ಬಗ್ಗೆ ಸಂತಾಪವನ್ನು ಸೂಚಿಸುವಲ್ಲಿ ಹಾಗೂ ದಿವಂಗತರ ಕುಟುಂಬ ವರ್ಗದವರಿಗೆ ಈ ಸಭೆಯು ಸಂತಾಪವನ್ನು ವ್ಯಕ್ತಪಡಿಸುವಲ್ಲಿ ನನ್ನೊಡನೆ ಧಾಗವಹಿಸುವಂತೆ ಕೋರುತ್ತೇನೆ.

ತಾವೆಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸುವ ಮೂಲಕ ದಿವಂಗತರಿಗೆ ಗೌರವವನ್ನು ಸೂಚಿಸಬೇಕೆಂದು ಕೋರುತ್ತೇನೆ.

(ಸಭೆಯು ಎದ್ದು ನಿಂತು ದಿವಂಗತರಿಗೆ ಒಂದು ನಿಮಿಷ ಮೌನವನ್ನು ಆಚರಿಸಿತು)

STARRED QUESTIONS

(to which oral answers were given)

Affoerstation in Gulbarga District

21. SRI PRABHAKAR TELKAR (Kalagi).—Will the Minister of State for Forests be pleased to state :—

(*a*) the extent of afforestation works taken up in Gulbarga District during the year 1972-73 to 1974-75 (Talukwise particulars be furnished) ;

(*b*) whether Government have taken any steps to minimise the drought affected areas of this District by afforestation works as suggested by M.L.A. (Kalagi) ;

(*c*) whether Government have any other plan or proposal for afforestation in Gulbarga district in view of repeated droughts faced by Gulbarga district ;

(*d*) if so, the salent features of such plan or proposal and the period required for completion of the same ?

SRI H. C. SRIKANTAIAH (Minister of State for Forests).—

(*a*) Please see the Statement placed on the Table of the House. *

(*b*) The afforestation programme has been increased.

---

* Copy placed in the Karnataka Legislative library *vide* No. 1 dated 8th November 1976.